## ಸಾಹಿತ್ಯ ಸಿಂಚನ

ನೀನೊಮ್ಮೆ ಭೂಮಿಯಾಗಿಬಿಡು
ಭಾರ-ಸಹನೆಗಳ ಅರಿಯಲು
ಲಯಗೊಳಿಸೊ ಒಡಲುರಿಯಿದ್ದರೂ
ವಾತ್ಸಲ್ಯ ತೋರುವುದ ಕಲಿಯಲು

ನೀನೊಮ್ಮೆ ಮುಖವಾಡ ತೆಗೆದು ಬಿಡು
ಅಪರಿಮಿತ ಆನಂದ ಹೊಂದಲು
ಹತ್ತಿಯಂತೆ ಮನ ಹಗುರಾಗಲು
ದ್ವೇಷ ತೊರೆದಾಗಿನ ಬೆಲೆ ತಿಳಿಯಲು

ನೀನೊಮ್ಮೆ ಆ ಮಹಾತ್ಮನೇ ಆಗಿಬಿಡು
ಸತ್ಯದ ಹಾದಿಗೆ ಮರಳಲು
ಕುಣಿಕೆ ತಪ್ಪಿಗೆ ಪ್ರಾಯಶ್ಚತ್ತ
ಪಟ್ಟು ಆ ಹರಿಶ್ಚಂದ್ರನಂತಾಗಲು

ನೀನೊಮ್ಮೆ ಮಲ್ಲಿಗೆಯಾಗಿಬಿಡು
ಜಗದೊಳಿತಿಗೆ ಗಂಧ ಸೂಸಲು
ಬೆಸೆವ ಸೇತುವೆಯಂತಾಗಿ
ಒಳ್ನುಡಿಯ ಪರಿಮಳವ ಪಸರಿಸಲು

ನೀನೊಮ್ಮೆ ನಿಷ್ಪಕ್ಷಪಾತಿಯಾಗಿಬಿಡು
ಅರ್ಹರು ಸ್ಥಾನ ಗಿಟ್ಟಿಸಲು
ತಿಳಿಕೊಳದ ನೀರಂತೆ ಪರಿಶುದ್ಧನಾಗಿ ಬಿಡು
ಹೆತ್ತೊಡಲು ತಾ ಸಂಭ್ರಮಿಸಲು

ತುಳಸಿದಾಸ ಬಿ ಎಸ್
ಶಿಕ್ಷಕರು

## ಡಿಸೆಂಬರ್ 13ರಂದು ರಾಷ್ಟ್ರೀಯ ಲೋಕ ಅದಾಲತ್

ನೈಜ್ಯ ದೆಸೆ ನ್ಯೂಸ್

ರಾಯಚೂರು ನವೆಂಬರ್ 23 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲಾ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ನ್ಯಾಯಾಲಯಗಳಲ್ಲಿ ಡಿಸೆಂಬರ್ 13ರಂದು ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ. ಲೋಕ ಅದಾಲತ್‌ನ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ಮತ್ತು ಕ್ರಿಮಿನಲ್ (ರಾಜಿಯಾಗುವಂತಹ) ಮೊಕದ್ದಮೆಗಳ ಜೊತೆಗೆ ಮೋಟಾರ ವಾಹನ ಪ್ರಕರಣಗಳು ಮತ್ತು ಎಲ್ಲಾ ಬಗೆಯ ಪ್ರಕರಣಗಳನ್ನು (ಕೇಸುಗಳನ್ನು) ಲೋಕ ಅದಾಲತ್ ಮುಖಾಂತರ ಇತ್ಯರ್ಥಗೊಳಿಸಲಾಗುವುದು. ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು (ಕೇಸುಗಳನ್ನು) ರಾಷ್ಟ್ರೀಯ ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಲು ವಕೀಲರು ಹಾಗೂ ಕಕ್ಷಿದಾರರಿಗೆ ಸದಾವಕಾಶ ಒದಗಿಸಲಾಗಿದೆ. ಆದ್ದರಿಂದ ಎಲ್ಲಾ ವಕೀಲರು, ಕಕ್ಷಿದಾರರು, ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯಪೂರ್ವ ಎಲ್ಲಾ ಬಗೆಯ ಕೇಸುಗಳನ್ನು ಲೋಕ ಅದಾಲತನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಆಗಿರುವ ಗೌರವಾನ್ವಿತ ಹಿರಿಯ ಶ್ರೇಣಿಯ ದಾವಾಣಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವರಾಜ ನಾಯಾಕ ಗೆ ಜೆಡಿಎಸ್ ಕಾರ್ಯ ಕರ್ತರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಸಿರವಾರ:–ರವಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕಿನ ಜೆ.ಡಿ. ಎಸ್ ಎಸ್ ಟಿ ಘಟಕದ ಅಧ್ಯಕ್ಷರಾದ ಶಿವರಾಜ್ ನಾಯಕ ಚಾಗಭಾವಿ ಇವರಿಗೆ



ಸಿರವಾರ ಜೆಡಿಎಸ್ ಪಕ್ಷದ ಕಾರ್ಯಕರ್ತರಿಂದ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಚಂದ್ರು ಗೌಡ ಚಾಗ ಬಾವಿ ಹನುಮೇಶ್ ನಾಯಕ ರಮೇಶ ನಾಯಕ ಭೀಮರಾಜ ಅಂಬಿಗ ವೀರೇಶ್ ನಾಯಕ ಮಂಜು ನಾಯಕ್ ರಾಜೇಶ್ ಶರಣ ಇನ್ನು ಜೆ ಡಿ ಎಸ್ ಪಕ್ಷದ ಮುಖಂಡರು ಭಾಗವಹಿಸಿದ್ದರು.

# ಶ್ರೀ ಉದ್ಭವ ಆಂಜನೇಯ ಸ್ವಾಮಿ ನೂತನ ಆಲಯ ಶಿಖರ ಪ್ರತಿಷ್ಠಾಪನೆ

## ಸಚಿವ ಎನ್ ಎಸ್ ಬೋಸರಾತು ಹಾಗೂ ಸಂಸದ ಜಿ ಕುಮಾರ ನಾಯಕ ಭಾಗಿ

ನೈಜ್ಯ ದೆಸೆ ನ್ಯೂಸ್

ವಾಸವಿ ನಗರ ಬಡಾವಣೆಯಲ್ಲಿ ಶ್ರೀ ಉದ್ಭವ ಆಂಜನೇಯ ಸ್ವಾಮಿ ನೂತನ ಆಲಯ ಶಿಖರ ಪ್ರತಿಷ್ಠಾಪನೆ ಹಾಗೂ ನಾಗ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಹಾಗೂ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ ನಾಯಕ ಅವರು ವಿಶೇಷ ಪೂಜೆ ಹವನ ಕಾರ್ಯಕ್ರಮದಲ್ಲಿ ಭಾಗವಹಿಸಿ ನಾಡಿನ ಸಮಸ್ತ ಜನತೆಗೆ ಒಳಿತಾಗಲಿ ಎಂದು ಪ್ರಾರ್ಥನೆ ಮಾಡಿದರು.





ನಂತರ ಶ್ರೀ ಉದ್ಭವಮೂರ್ತಿ ಆಂಜನೇಯ ಸ್ವಾಮಿ ನೂತನ ಆಲಯ ಶಿಖರ ಪ್ರತಿಷ್ಠಾಪನ ಸಮಿತಿಯಿಂದ ಸಚಿವ ಎನ್ ಎಸ್ ಬೋಸರಾಜು ಹಾಗೂ ಸಂಸದ ಜಿ ಕುಮಾರ್ ನಾಯಕ ಅವರಿಗೆ ದೇವಸ್ಥಾನದ ಶ್ರೀಗಳು ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರಾದ ಕೆ ಶಾಂತಪ್ಪ ಜಯವಂತರಾವ್ ಪತಂಗೆ, ಕಡಗೋಲ್ ಆಂಜನೇಯ್ಯ, ಜಿ ಶಿವಮೂರ್ತಿ ರುದ್ರಪ್ಪ ಅಂಗಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಎಕ್ಸಲೆಂಟ್ ಕಾಲೇಜಿನ ವಿದ್ಯಾರ್ಥಿಗಳು

## ವಿವಿಧ ಸ್ಪರ್ಧೆಗಳಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಎಕ್ಸಲೆಂಟ್ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆ

*ಜಿಲ್ಲಾ ಮಟ್ಟದ ಸಾಂಸ್ಕೃತಿಕ ವಿವಿಧ ಸ್ಪರ್ಧೆಗಳಲ್ಲಿ ಎಕ್ಸಲೆಂಟ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಐದು ಸ್ಪರ್ಧೆಗಳಲ್ಲಿ ದ್ವಿತೀಯ ಮತ್ತು ಎರಡು ಸ್ಪರ್ಧೆಗಳಲ್ಲಿ ತೃತೀಯ ಸ್ಥಾನವನ್ನು ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.*ಜನಪದ ಗೀತೆ ಸ್ಪರ್ಧೆಯಲ್ಲಿ ಫಕೀರಮ್ಮ ದ್ವಿತೀಯ ಸ್ಥಾನ, ಚಿತ್ರಕಲಾ ಸ್ಪರ್ಧೆಯಲ್ಲಿ ಅನಿಲ್ ಕುಮಾರ್ ದ್ವಿತೀಯ ಸ್ಥಾನ, ಕನ್ನಡ ಚರ್ಚಾ ಸ್ಪರ್ಧೆಯಲ್ಲಿ



ಪಾರ್ವತಿ ದ್ವಿತೀಯ ಸ್ಥಾನ, ಇಂಗ್ಲೀಷ ಪ್ರಬಂಧ ಸ್ಪರ್ಧೆಯಲ್ಲಿ ಶಾಂಭವಿ ದ್ವಿತೀಯ ಸ್ಥಾನ, ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಮೌನಿಕ ದ್ವಿತೀಯ ಸ್ಥಾನ, ಭಾವಗೀತೆ ಸ್ಪರ್ಧೆಯಲ್ಲಿ ಹನುಮೇಶ ತೃತೀಯ ಸ್ಥಾನ, ರಸಪ್ರಶ್ನೆ ಸ್ಪರ್ಧೆಯಲ್ಲಿ ರಮ್ಯ ಮತ್ತು ವಿದ್ಯಾ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ಈ ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿಯವರು, ಕಾರ್ಯದರ್ಶಿ ಗಳಾದ ಎಂ ವೆಂಕಟರಾವ್,ಪ್ರಾಚಾರ್ಯರಾದ ಮಂಜುನಾಥ ಸೋಮಲಾಪುರ, ಸಾಂಸ್ಕೃತಿಕ ಕಾರ್ಯದರ್ಶಿಗಳಾದ ನಾಗರಾಜ ಮುಕ್ಕುಂದಾ ಹಾಗೂ ಉಪನ್ಯಾಸಕ ಬಳಗ ಅಭಿನಂದಿಸಿದ್ದಾರೆ.

# ಮಾಜಿ ಸೈನಿಕರ 15ನೇ ವಾರ್ಷಿಕೋತ್ಸವ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮ ಯಶಸ್ವಿ

ನೈಜ್ಯ ದೆಸೆ ನ್ಯೂಸ್

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಜಿಲ್ಲಾ ಘಟಕ ರಾಯಚೂರು 15ನೆಯ ವಾರ್ಷಿಕೋತ್ಸವ ಮತ್ತು ಇದರ ಅಂಗವಾಗಿ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ರಾಯಚೂರು ನಗರದ ಭಾರತೀಯ ವೈದ್ಯಕೀಯ ಕುಟುಂಬ ಸಂಘದಲ್ಲಿ ದಿನಾಂಕ 23.11.2025 ರಂದು ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮವನ್ನು ಜ್ಯೋತಿಯನ್ನು ಬೆಳಗಿಸಸುವದರ ಕಾರ್ಯಕ್ರಮವನ್ನು ಉದ್ಘಾಟನೆಯ ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ.ಸೈನಿಕ ನಮ್ಮ ದೇಶದ ಶ್ರೇಷ್ಠ ಆಸ್ತಿ.ನಮ್ಮ ಹೆಮ್ಮೆ. ಎಂದರೆ ತಪ್ಪಾಗಲಾರದು. ಸೈನಿಕರು. ನಮ್ಮ ದೇಶದ ಗಡಿ ಕಾಯುವಂತ ಕಾವಲುಗಾರ.ದೇಶದ ರಕ್ಷಣೆಗಾಗಿ ಹೆತ್ತವರನ್ನು ತನ್ನ ಕುಟುಂಬದವರನ್ನು ಬಿಟ್ಟು ಮನದಲ್ಲಿ ಎಷ್ಟೇ ನೋವುಗಳಿದ್ದರು ಅವುಗಳನ್ನ ಬದಿಗೊತ್ತಿ ತನ್ನ ಸೇವೆ ದೇಶದ ರಕ್ಷಣೆಗೆ ಎಂಬುದನ್ನ ಅಥ–ರ್ಗೊಂಡಿರುತ್ತಾನೆ.ಸೈನಿಕರ ಕೆಲಸವೂ ತುಂಬಾ ಕಷ್ಟಕರವಾಗಿದ್ದು. ಚಳಿ.ಬಿಸಿಲು. ಮಳೆ.ಎಂಬುದನ್ನು ಲೆಕ್ಕಿಸದೆ. ಹಗಲು. ರಾತ್ರಿ ಗಡಿ ಭದ್ರತಾ ಪಡೆಯಲಿ ತಮ್ಮ ಕಾಯಕವನ್ನು ಮಾಡುತ್ತಾರೆ.ಯುದ್ಧದ ಸಂದರ್ಭದಲ್ಲಿ ಹೋರಾಡಿ ಯಶಸ್ವಿ ಸಾಧಿಸಲು ಅವರ ದೇಶಭಕ್ತಿ ಮತ್ತು ಅವರ ಸಾಹಸವನ್ನು. ಪ್ರತಿಯೊಬ್ಬರು ಮರೆ ವಂತಿಲ್ಲ.ಊಟ ಮಾಡುವಾಗ ರೈತನನ್ನು ನೆನೆಸು. ಮಲಗುವಾಗ ಸೈನಿಕರನ್ನು ನೆನೆಸು. ಎನ್ನುವಂತೆ.ಜನ್ಮ ಭೂಮಿಯ ಸೇವೆಗಾಗಿ ಜೀವನವನ್ನೇ ಮುಡುಪಾಗಿಟ್ಟು





ಕರ್ತವ್ಯ ನಿರ್ವಹಿಸುವ ಕಾಯಕಯೋಗಿಗಳೆಂದರೆ ಸೈನಿಕರು.ತಮ್ಮ ಹಲವಾರು ಬೇಡಿಕೆಗಳನ್ನ ಸುಮಾರು ದಿನಗಳಿಂದಲೂ ಮಾಡುತ್ತೀರಿ ಅವುಗಳನ್ನ ಜನಪ್ರತಿನಿಧಿಗಳನ್ನು ಸಂಪರ್ಕ ಮಾಡಿ ಸಕರಾತ್ಮಕ ರೀತಿಯಲ್ಲಿ ಈಡೇ–ರಿಸಿಕೊಳ್ಳಬೇಕು. ಎಂದು ಡಾ. ಬಿರಾದಾರ್ ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಧ್ಯಕ್ಷರಾದ ಎಂ ಎ ರಹಿಮ ಮಾತನಾಡುತ್ತಾ ನಮ್ಮ ಬೇಡಿಕೆಗಳ ಈಡೇರಿಸಿಕೊಳ್ಳಲು ಒಗ್ಗಟ್ಟಾಗಿ ಕಾರ್ಯವನ್ನ ನಿರ್ವಹಿಸಬೇಕು.ಅಂದಾಗ ಮಾತ್ರ ನಮ್ಮ ಬೇಡಿಕೆಗಳು ದಲಿತವಾಗಿ ಬೇಗನೆ ಈಡೇ–ರಿಸಿಕೊಳ್ಳಬಹುದು ಮಹಾನಗರ ಪಾಲಿಕೆಯ ಆಯುಕ್ತರದ ಜುಬಿನ್ ಮಹಾ ಪಾತ್ರ ನಮಗೆ ಒಂದು ರೂಮಿನ ವ್ಯವಸ್ಥೆ ಮಾಡಿದ್ದಾರೆ .ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸುಬೇದಾರ್ ಟಿ.ಆರ್ ಸಿಂಗ್ ಎ.ಸಿ.ಸಿ ಬಟಾಲಿಯನ್ ಸಿಂಧನೂರ್ ತಾಲೂಕು ಅಧ್ಯಕ್ಷರಾದ ಪರಶುರಾಮ್ ಮೇಜರ್ ಡಾ. ದೀಪಿಕಾಪಾಟೀಲ್ ಸೇರಿದ ಇನ್ನಿತರ ಕಾರ್ಯಕ್ರಮ ಕುರಿತು ಮಾತನಾಡಿದರು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕಾರ್ಯಕ್ರಮದ ರೂವಾರಿಗಳಾದ ಚನ್ನ ರೆಡ್ಡಿ ಅವರು 15 ವರ್ಷಗಳಿಂದ ಸಂಘ ನಡೆದು ಬಂದ ದಾ–ರಿಯ ಕುಳಿತು ಬಹಳ ಅರ್ತಪೂರ್ಣವಾಗಿ ಮಾತನಾಡಿದರು ವಿಜಯಕುಮಾರ್ ದಿನ್ನಿ ನವಿಬೇಕು ನಾಡಗೀತೆಯನ್ನು ಹೇಳಿದರು ಅಲ್ಲಿ ಮಲಬಾರ್ ಕೊನೆಯಲ್ಲಿ ವಂದಿಸಿದರು ಸುರೇಶ್ ಕಾರ್ಯಕ್ರಮ ನಿರೂಪಣೆ ಮಾಡಿದನು ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ಮಾಜಿ ಸೈನಿಕರು ಸೇರಿದಂತೆ ಅವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು ಇದೇ ಸಂದರ್ಭದಲ್ಲಿ ಹಲವಾರು ಯುವಕರು ರಕ್ತದಾನ ಮಾಡಿ ತಮ್ಮ ದೇಶಭಕ್ತಿಯನ್ನು ಸಮಾಜ ಸ್ಮರಣೆ ಮಾಡಿದರು..

ಈಕಾರ್ಯಕ್ರಮದಲ್ಲಿ

ಡಾ ನಿವೃತ್ತ ಮೇಜರ್ ಶ್ರೀಮತಿ ದೀಪಶ್ರೀ ಪಾಟೀಲ್, ಡಾ ನಿವೃತ್ತ ಮೇಜರ್ ಮಲ್ಲಿಕಾರ್ಜುನ, ಶ್ರೀ ಡಾ ಡಿಎ ಬಿರಾದಾರ ಸುಭೇದಾರ್ ತೇಹರ್ ಸಿಂಗ್ ಎನ್ ಸಿಸಿ ಬಟಾಲಿಯನ್ ಮತ್ತು ಅ ಕ ಮಾ ಸೈ ಸಂಘದ ಗೌರವ ಅಧ್ಯಕ್ಷರುಗಳಾದ ಶ್ರೀ ಸುಂದರ್ ಸಿಂಗ್, ಶ್ರೀ ಎಮ್ ಎ ರಹೀಮ್ ಜಿಲ್ಲಾ ಅಧ್ಯಕ್ಷರಾದ ಶ್ರೀ ಚೆನ್ನಾರೆಡ್ಡಿ, ಉಪಾಧ್ಯಕ್ಷ ಶ್ರೀ ಗೋಪಾಲ್ ನಾಯಕ್, ಪ್ರದಾನ ಕಾರ್ಯದರ್ಶಿ ಗಳಾದ ಶ್ರೀ ಅಲಿ ಮಲಬಾರ್,

ಜಿಲ್ಲೆಯ ಎಲ್ಲಾ ತಾಲ್ಲೂಕು ಗಳಿಂದ ಸರ್ವ ಮಾಜಿ ಸೈನಿಕರು ಗಳು ಮತ್ತು ಕುಟುಂಬದ ಸದಸ್ಯರು ಗಳು ಕಾರ್ಯಕ್ರಮ ದಲ್ಲಿ ಭಾಗಿಯಾಗಿದ್ದರು

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 17ನೇ ಸಂಸ್ಥಾಪನಾ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

ಕೃಷಿ ವಿಜ್ಞಾನಗಳ ವಿಶ್ವವಿದ್ಯಾ ಲಯ ರಾಯಚೂರನಲ್ಲಿ 22 ನವೆಂಬರ 2025 ರಂದು 17ನೇ ಸಂಸ್ಥಾಪನಾ ದಿನಾಚರಣೆ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಜೀವಿಪ–ರಿಸ್ಥಿತಿ ಹಾಗೂ ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶ್ರೀನಿವಾಸಲು ಉದ್ಘಾಟಿಸಿದರು.

ಮಾತನಾಡಿದ ಅವರು, ಜೀವನದಲ್ಲಿ ಬರುವ ಬದಲಾವ ಣೆಗಳು ಮತ್ತು ಸವಾಲುಗಳನ್ನು ಸರಿಯಾದ ರೀತಿಯಲ್ಲಿ ಎದುರಿಸಿ ವಿದ್ಯಾರ್ಥಿಗಳು ತಮ್ಮ ಗುರಿ ತಲುಪಬೇಕೆಂದು ಕರೆ ನೀಡಿದರು. ಗ್ರಂಥ–ಾಲಯವನ್ನು ಜ್ಞಾನ ದೇವಾಲಯದಂತೆ ಕಾಣಬೇಕು,

ಸ್ಪರ್ಧೆಯಲ್ಲದೇ ಸ್ವ–ಪ್ರಗತಿಗೆ ಆದ್ಯತೆ ನೀಡಬೇಕು ಎಂದು ವಿದ್ಯಾ ರ್ಥಿಗಳಿಗೆ ಪ್ರೇರಣೆ ನೀಡಿದರು. ಕೃಷಿ ಕ್ಷೇತ್ರದ ಮಹತ್ವವನ್ನು ಉಲ್ಲೇಖಿಸಿ, ಕೃಷಿತಾಂತ್ರಿಕ ಶಿಕ್ಷಣ ಪಡೆಯು ತ್ತಿರುವ ನೀವು ಅದೃಷ್ಟ ವಂತರಾಗಿ ದ್ದೀರಿ. ಸಮಾಜವೂ ನಿಮ್ಮ ಸೇವೆ ಯನ್ನು ನಿರೀಕ್ಷಿಸುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ ಕುಲಪತಿ ಡಾ. ಎಂ. ಹನುಮಂತಪ್ಪ ಅವರು, ವಿದ್ಯಾರ್ಥಿಗಳು ದೇಶ–ರಾಜ್ಯಗಳ ವಿವಿಧ ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ವಿಶ್ವವಿದ್ಯಾಲಯವು ಇದುವರೆಗೆ ರೈತರಿಗೆ 55 ಹೊಸ ತಳಿಗಳು ಹಾಗೂ 500 ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದ್ದು, ಇ–ಸ್ಯಾಪ್' ಸೇರಿದಂತೆ ಹಲವು ಆವಿಷ್ಕಾರಗಳು ದೇಶ ದಾದ್ಯಂತ ಉಪಯೋಗ ವಾಗುತ್ತಿ ದ್ದವೆಂದು ಹೇಳಿದರು. ಈ ವರ್ಷ ವಿಶ್ವವಿದ್ಯಾಲಯ ಸಂಶೋಧಿಸಿದ ನಾಲ್ಕು ತಂತ್ರಜ್ಞಾನಗಳಿಗೆ ಪೇಟೆಂಟ್ ದೊರೆತಿರುವುದನ್ನೂ ಉಲ್ಲೇಖಿಸಿದರು. ಅವರು ಆಡಳಿತ ಮಂಡಳಿಯ ಸದಸ್ಯ ಮಲ್ಲಿಕಾರ್ಜುನ ಡಿ. ಅವರು ಸಂಶೋಧನೆಗಳ ಫಲಿತಾಂಶಗಳಲ್ಲಿ ಕೇವಲ 20% ಮಾತ್ರ ರೈತರಿಗೆ ತಲುಪುತ್ತಿರುವುದನ್ನು ಲಕ್ಷ್ಯಕ್ಕೆ ತೆಗೆದುಕೊಂಡು, ತಂತ್ರಜ್ಞಾನ ಅಳವಡಿಕೆಯ ಬಗ್ಗೆ




ವಿಶೇಷ ಅಧ್ಯಯನ ಅವಶ್ಯಕತೆ ಇದೆ ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ಶಿಸ್ತು ಮತ್ತು ಬದ್ಧತೆಯಿಂದ ಜ್ಞಾನ ಸಂಪಾದಿಸಿ ರೈತರಿಗೆ ಸೇವೆ ಸಲ್ಲಿಸಬೇ ಕೆಂದರು. ವಿಶ್ವವಿದ್ಯಾಲಯದ ಪ್ರಥಮ ಕುಲಪತಿ ಡಾ. ಬಿ.ವಿ. ಪಾಟೀಲ್, ಕೃಷಿ ಮಹಾವಿದ್ಯಾಲಯದ ನಿವೃತ್ತ ಡೀನ್ ಡಾ. ಸಿ.ವಿ. ಪಾಟೀಲ್, ಆಡಳಿತ ಮಂಡಳಿಯ ಇನ್ನೊಬ್ಬ ಸದಸ್ಯ ಶ್ರೀ ಮಲ್ಲೇಶ ಕೊಲಿಮಿ ಅವರು ಶುಭಾಶಯ ತಿಳಿಸಿದರು. ಈ ಸಂದರ್ಭದಲ್ಲಿ ಮಸ್ಕಿ ತಾಲ್ಲೂಕಿನ ಗುಡಿಹಾಳ ಗ್ರಾಮದ ಶಿವಕುಮಾರ ಪಾಟೀಲ್ ಅವರಿಗೆ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಾಗಿ 2025ರ ಕೃಷಿರತ್ನ ಪ್ರಶಸ್ತಿ ಹಾಗೂ ಚಿನ್ನದ ಪದಕ ಪ್ರದಾನಿಸಲಾಯಿತು. ಜೊತೆಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಅತ್ಯುತ್ತಮ ಶಿಕ್ಷಕ, ಸಂಶೋಧನಾ ವಿಜ್ಞಾನಿ, ವಿಸ್ತರಣಾ ವಿಜ್ಞಾನಿ, ಕ್ಷೇತ್ರ ಅಧೀಕ್ಷಕ, ಸೇವಾ ಸಿಬ್ಬಂದಿ, ಕ್ಷೇತ್ರ ಸಹಾಯಕ ಹಾಗೂ ಅತ್ಯುತ್ತಮ ಕೃಷಿ ಕಾರ್ಮಿಕ ಪ್ರಶಸ್ತಿಗಳನ್ನು ವಿತರಿಸಲಾಯಿತು. ವಿಶ್ವವಿದ್ಯಾಲಯದ ಉಪನ್ಯಾಸಕರು , ಸಿಬ್ಬಂದಿ ಯವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು...

## ನೇಮಕಾತಿ ಪ್ರಕಟಣೆ

ನೇಮಕಾತಿ 2025: 90 ಲೋವರ್ ಡಿವಿಷನ್ ಕ್ಲರ್ಕ್, ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹೋಮಿಯೋಪತಿಯಲ್ಲಿ ಕೇಂದ್ರೀಯ ಸಂಶೋಧನಾ ಮಂಡಳಿಯು ನವೆಂಬರ್ 2025 ರ ಅಅಖಊ ಅಧಿಕೃತ ಅಧಿಸೂಚನೆಯ ಮೂಲಕ ಲೋವರ್ ಡಿವಿಷನ್ ಕ್ಲರ್ಕ್, ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 26–ನವೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

CCRH ನೇಮಕಾತಿ ಸಂಸ್ಥೆ ಹೋಮಿಯೋಪತಿಯಲ್ಲಿ ಕೇಂದ್ರೀಯ ಸಂಶೋಧನಾ ಮಂಡಳಿ ಪೋಸ್ಟ್ ಹೆಸರು: ಲೋವರ್ ಡಿವಿಷನ್ ಕ್ಲರ್ಕ್, ಚಾಲಕ ಖಾಲಿ ಹುದ್ದೆಗಳ ಸಂಖ್ಯೆ 90
ಅರ್ಹತೆ 10ನೇ, 12ನೇ, ಡಿಪ್ಲೊಮಾ, ಪದವಿ, ಬಿ.ಎಸ್ಸಿ, ಪದವಿ, ಎಂಡಿ, ಸ್ನಾತಕೋತ್ತರ ಪದವಿ, ಎಂ.ಫಾರ್ಮ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26–ನವೆಂಬರ್–2025
https://eapplynow.com/ : Official
Website: ccrhindia.ayush.gov.in

ಕೊನೆಯ ದಿನಾಂಕ: 10–ಡಿಸೆಂಬರ್–2025


## ನಾಯಕತ್ವ ಬದಲಾವಣೆ ಕ್ಲಾರಿಟಿ ಬಯಸಿದ ಡಿಕೆಶಿ, ಜಾರ್ಜ್‌ಗೆ ಟಾಸ್ಕ್ ನೀಡಿ ತೆರೆ ಹಿಂದೆ ಸರಿಯಿತಾ ಹೈಕಮಾಂಡ್

❑ ನೈಜ್ಯ ದೆಸೆ ನ್ಯೂಸ್





ಬೆಂಗಳೂರು (ನ.23) ರಾಜ್ಯದಲ್ಲಿ ನಾಯಕತ್ವ ಬದಲಾವಣೆ, ಅಧಿಕಾರ ಬದಲಾವಣೆ ಸೇರಿದಂತೆ ರಾಜಕೀಯ ಚಟುವಟಿ–ಕೆ ತೀವ್ರಗೊಂಡಿದೆ. ಸಿದ್ದರಾಮಯ್ಯ ಬಣ, ಡಿಕೆ ಶಿವಕುಮಾರ್ ಬಣ ನಾಯಕರಿಂದ ಹೈಕಮಾಂಡ್ ಭೇಟಿ ಬಳಿಕ ಸ್ವತಃ ಸಿದ್ದರಾಮಯ್ಯನವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಇತ್ತ ಡಿಕೆ ಶಿವಕುಮಾರ್ ನಾಯಕತ್ವ ಬದಲಾವಣೆ ವಿಚಾರದಲ್ಲಿ ಡಿಕೆ ಶಿವಕುಮಾರ್ ಸ್ಪಷ್ಟತೆ ಬಯಸಿದ್ದಾರೆ ಎಂದು ರಾಜ–ಕೀಯ ಪಡಸಾಲೆಯಲ್ಲಿ ಚರ್ಚೆಯಾಗುತ್ತಿದೆ. ನಾಯಕತ್ವ ಬದಲಾವಣೆ ವಿಚಾರ ಹೈಕಮಾಂಡ್ ಮುಂದೆ ಇದೆಯೋ ಅಥವಾ ಇಲ್ಲವೋ ಅನ್ನೋದು ಸ್ಪಷ್ಟವಾಗಿ ತಿಳಿಸಲು ಡಿಕೆ ಶಿವಕುಮಾರ್ ಪಟ್ಟು ಹಿಡಿದಿದ್ದಾರೆ ಅನ್ನೋ ಮಾತುಗಳು ಕೇಳಿಬರುತ್ತಿದೆ. ಹೀಗಾಗಿಯೇ ಇಂದು ಕೆಜೆ ಜಾರ್ಜ್ ನಿವಾಸಕ್ಕೆ ಡಿಕೆ ಶಿವಕುಮಾರ್ ಭೇಟಿ ನೀಡಿ ಮಹತ್ವದ ಮಾತುಕತ ನಡೆಸಿದ್ದಾರೆ.

ಡಿಕೆಶಿ ಮನವೊಲಿಕೆಗೆ ಮುಂದಾದ ಹೈಕಮಾಂಡ್ ನಾಯಕತ್ವ ಬದಲಾವಣೆ ವಿಚಾರದಲ್ಲಿ ಡಿಕೆ ಶಿವಕುಮಾರ್ ಸ್ಪಷ್ಟತೆ ಬಯಸಿದ್ದಾರೆ. ಸದ್ಯ ಯಾವುದೇ ನಿರ್ಧಾರವಿಲ್ಲ ಎಂದು ಹೈಕಮಾಂಡ್ ಹೇಳಿದೆ. ಇಷ್ಟೇ ಅಲ್ಲ ಮಾರ್ಚ್ ತಿಂಗಳವರೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳದಂತೆ ಡಿಕೆ ಶಿವಕುಮಾರ್ ಮನ ಒಲಿಸಲು ಕಾಂಗ್ರೆಸ ಹೈಕಮಾಂಡ್ ಮುಂದಾಗಿದ ಅನ್ನೋ ಮಾತುಗಳು ಬಲವಾಗಿ ಕೇಳಿಬರುತ್ತಿದೆ. ಇಷ್ಟೇ ಅಲ್ಲ ಡಿಕೆ ಶಿವಕುಮಾರ್ ಮನ ಒಲಿಸುವ ಜವಾಬ್ದಾರಿಯನ್ನು ಕೆಜೆ ಜಾರ್ಜ್‌ಗೆ ನೀಡಲಾಗಿದೆ. ಇಂದು ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ಬಳಿಕ ಕೆ.ಜೆ.ಜಾರ್ಜ್‌ಗೆ ಈ ಜವಾಬ್ದಾರಿ ನೀಡಲಾಗಿದೆ ಎನ್ನಲಾಗುತ್ತಿದೆ. ಖರ್ಗೆ ಭೇಟಿ ಬಳಿಕ ಡಿಕೆಶಿವಕುಮಾರ್ ಅವರನ್ನ ಕರೆಸಿ ಕೆಜಿ ಜಾರ್ಜ್ ಮಾತುಕತೆ ನಡೆಸಿದ್ದಾರೆ. ರೇಸ್ ಕೋರ್ಸ್ ರಸ್ತೆಯಲ್ಲಿರುವ ಕೆ.ಜೆ.ಜಾರ್ಜ್ ಸರ್ಕಾರಿ ನಿವಾಸಕ್ಕೆ ತೆರಳಿದ ಡಿಕೆ ಶಿವಕುಮಾರ್ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಒಂದು ಗಂಟೆಗಳ ಕಾಲ ಮಾತುಕತೆ ನಡೆದಿದೆ. ಮಾತುಕತೆ ಬಳಿಕ ಉಭಯ ನಾಯಕರು ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡದೇ ತೆರಳಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ನಾಯಕರು ಕಳೆದ ಮೂರು ದಿನಗಳಿಂದ ಮಲ್ಲಿಕಾರ್ಜುನ ಖರ್ಗೆ ರಾಜ್ಯದಲ್ಲಿದ್ದಾರೆ. ಇದರ ನಡುವೆ ಖರ್ಗೆ ರಾಜ್ಯ ನಾಯಕರ ಭೇಟಿ ಹಾಗೂ ಮಾತುಕತೆಗೆ ಸಮಯ ನೀಡಿದ್ದರು. ಸಿದ್ದರಾಮಯ್ಯ ಸೇ–ರಿದಂತೆ ಹಲವು ನಾಯಕರು ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ್ದಾರೆ. ಸಿದ್ದರಾಮಯ್ಯ ನಿನ್ನೆ ರಾತ್ರಿ ಖರ್ಗೆ ನಿವಾಸಕ್ಕೆ ತೆರಳಿ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಸುದೀರ್ಘ ಮಾತುಕತೆ ನಡೆಸಿತ್ತು. ಈ ವೇಳೆ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗೆ ಮಲ್ಲಿಕಾರ್ಜುನ ಖರ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದರು. ಅನಗತ್ಯ ಹೇಳಿಕೆಗಳನ್ನು ಮಾಧ್ಯಮಗಳ ಮೂಲಕ ನೀಡುತ್ತಿರುವ ಕಾರಣ ಗೊಂದಲ ಸೃಷ್ಟಿಯಾಗುತ್ತಿದೆ. ನಾಯಕರು ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡುವ ಕುರಿತು ಖರ್ಗೆ ಒತ್ತಿ ಹೇಳಿದ್ದಾರೆ ಎನ್ನಲಾಗಿದೆ.

## ರಾಜ್ಯಮಟ್ಟದ ವಚನ ಸ್ಪರ್ಧೆಯಲ್ಲಿ ಶ್ರೀ ಜಗದೀಶ ಮರಪಳ್ಳಿಅವರಿಗೆ ರಾಜ್ಯಕ್ಕೆ ಎರಡನೇ ಸ್ಥಾನ..

❑ ನೈಜ್ಯ ದೆಸೆ ನ್ಯೂಸ್



ಇಂದು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ವಚನ ಕಂಠಪಾಠದಲ್ಲಿ ಶ್ರೀ ಜಗದೀಶ ಮರಪಳ್ಳಿ ಅವರು ರಾಜ್ಯಮಟ್ಟದ ವಚನ ಸ್ಪರ್ಧೆಯಲ್ಲಿ ಭಾಗವಹಿಸಿ 951 ವಚನಗಳನ್ನು ಕಂಠಪಾಠವಾಗಿ ಹೇಳಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿದ್ದಾರೆ....

## ಮಾಡಗಿರಿಯ ಆನಂದಪ್ಪ ಗೆ ಸಮಾಜಸೇವೆ ರತ್ನ ಪ್ರಶಸ್ತಿ ಲಭಿಸಿದೆ

❑ ನೈಜ್ಯ ದೆಸೆ ನ್ಯೂಸ್



ಸಿರವಾರ:ಯುವಸ್ಪೋಟ್ ನವಭಾರತ ಸೇವ ಟ್ರಸ್ಟ್ (ರಿ)ರಾಜ್ಯ ಮಟ್ಟದ ಸೇವೆ ಸಮ್ಮೇಳನ ವತಿಯಿಂದ ಕೊಡಮಾಡುವ ರಾಜ್ಯ ಮಟ್ಟದ ಸಮಾಜ ಸೇವೆ ಪ್ರಶಸ್ತಿಗೆ ತಾಲೂಕಿನ ಸಮಾಜ ಸೇವಕರು ಹಾಗೂ ಹುಟ್ಟುಹೋರಾಟಗಾರರಾದ ಆನಂದಪ್ಪ ಮಾಡಗಿರಿ ಅವರಿಗೆ ರಾಜ್ಯ ಮಟ್ಟದ ಸಮಾಜಸೇವ ರತ್ನ ಪ್ರಶಸ್ತಿ ಲಬಿಸಿದೆ. ಶುಕ್ರವಾರ ದಂದು ದೇವದುರ್ಗ ಪಟ್ಟಣದ ಖೇಣಿದ ಫಕ್ಷನ್ ಹಾಲ್ ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಆನಂದಪ್ಪ ಅವರು ತಾಲ್ಲೂಕಿನ ಮಾಡಗಿರಿ ಗ್ರಾಮಾದ ಹೋರಾಟಗಾರರು ಮತ್ತು ಸಮಾಜ ಸೇವಕರು,1995 ರಿಂದ ಹಿರಿಯ ಹೋರಾಟಗಾರರಾದ ದಿ॥ ಶ್ರೀ ಶಾಂತಪ್ಪ ದೊಡ್ಡಿ ಮಾನವಿ ಇವರ ಮಾರ್ಗದರ್ಶನದಲ್ಲಿ ಅನ್ಯಾಯದ ವಿರುದ್ಧ ಧ್ವನಿ ಎತ್ತಿ ಇಂದಿಗೂ ಸಮಾಜ ಸೇವೆಯಲ್ಲಿ ತಮ್ಮನು ತೊಡಗಿಸಿಕೊಂಡಿದ್ದಾರೆ. ಬಡವರಿಗೆ,ವಿಧವೆಯರಿಗೆ, ಅಂಗವಿಕಲರಿಗೆ ವೃದ್ಯಾಪ ವೇತನ ಕೊಡಿಸುವದು,ಮಾತ್ರವಲ್ಲದೆ ಸರಕಾರದ ಸೌಲಭ್ಯೆಗಳನ್ನು ಕೂಡಿಸುವದರ ಜೊತೆಗೆ ಹೋರಾಟದ ಮೂಲಕ,ಗ್ರಾಮ ಪಂಚಾಯತ್ ಮಟ್ಟದಿಂದ ತಾಲ್ಲೂಕು,ಜಿಲ್ಲೆ, ಹಾಗೂ ರಾಜ್ಯ ಮಟ್ಟದ ವರೆಗೆ ಕರ್ನಾಟಕ ದಲಿತ ಸಂರ್ಘ ರ್ಷ ಸಮಿತಿ. ಬೆನ್ನುಎಲುಭಾಗಿ ಹೋರಾಟದಲ್ಲಿ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದರು,ಅವರಿಗೆ ಲಭಿಸಿದ ಪ್ರಶಸ್ತಿಗೆ ಸಾರ್ವಜನಿಕರು ಹರ್ಶ ವ್ಯಕ್ತಪಡಿಸಿದ್ದಾರೆ.


ವರದಿಗಾಗಿ
ಸಂಪರ್ಕಿಸಿ
9902277588


## ಅಮರಯ್ಯ ಸ್ವಾಮಿ ಕರುನಾಡ ಸಿರಿ ಪ್ರಶಸ್ತಿ ಭಾಜನ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು:ನ.23– ನಗರದ ಗಂಗಾವತಿ ರಸ್ತೆಯ ವಿವೇರಾ ಗ್ರಾಂಡ್ ಹೋಟೆಲ್ ಹಿಂದೆ ಕರ್ನಾಟಕ ರಕ್ಷಣಾ ವೇದಿಕೆ ಕನ್ನಡ ಸೇನೆ ರಾಜ್ಯ ಘಟಕದ ವತಿಯಿಂದ ಹಮ್ಮಿಕೊಂಡಿದ್ದ 70 ನೇ ವರ್ಷದ ಕನ್ನಡ



ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕರುನಾಡಿನ ಕಾರುಣ್ಯಮೂರ್ತಿ ಕಾರುಣ್ಯಾಶ್ರಮ ಸಂಸ್ಥಾಪಕ ವೇದಮೂರ್ತಿ ಅಮರಯ್ಯಸ್ವಾಮಿ ಹಿರೇಮಠ ಇವರಿಗೆ ಕರುನಾಡ ಸಿಂಧೂರ ಸಿರಿ'ಪ್ರಶಸ್ತಿಯನ್ನು ಕನ್ನಡಪರ ಹೋರಾಟಗಾರರು ಹಾಗೂ ರಾಜಕೀಯ ಧು–ರೀಣ–ರು ಮತ್ತು ವಿವಿಧ ಸಮಾಜ ಸೇವಕರುಗಳ ಸಮಕ್ಷಮದಲ್ಲಿ ಸೇವಾ ಸಿರಿ ಟ್ರಸ್ಟ್ ಪ್ರದೀಪ್ ಪೂಜಾರ,ಸಮಾಜ ಸೇವಕ

## ರಾಯಚೂರು ಗ್ರಾಮೀಣ ಕ್ಷೇತ್ರ ಶಾಸಕರಾದ ದದ್ದಲ್ ಬಸನಗೌಡರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

ಸಿರವಾರ : ಕರ್ನಾಟಕ ಶ್ರೀ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಅವರಿಗೆ ಸಿರವಾರ ವಾಲ್ಮೀಕಿ ಸಮುದಾಯದ ಮುಖಂಡರು ವಾಲ್ಮೀಕಿ ಸರ್ಕಲ್ ನಲ್ಲಿ ಸನ್ಮಾನಿಸಿದರು.

ಸಿರವಾರ ಮಾರ್ಗವಾಗಿ ತೆರಳುತ್ತಿದ್ದ ಶಾಸಕ ಬಸನಗೌಡ ದದ್ದಲ್ ಅವರಿಗೆ ವಾಲ್ಮೀಕಿ ಸರ್ಕಲ್ ನಲ್ಲಿ ಶಾಲು ಹಾಕಿ ಸಮುದಾಯದ ಮುಖಂಡರು ಸನ್ಮಾನಿಸಿದರು. ಈ ವೇಳೆ ಮಾತನಾಡಿದ ಅಪ್ಪಾಜಿ ನಾಯಕ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವ ವಾಲ್ಮೀಕಿ ಸಮುದಾಯವು ಶೈಕ್ಷಣಿಕ ಹಾಗೂ ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಪಥದಲ್ಲಿ ಸಾಗಲು ಸರ್ಕಾರದ ಯೋಜನೆ ಹಾಗೂ



ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಕಾರ್ಯ ಪರಿಣಾಮಕಾರಿಯಾಗಿ ಆಗಬೇಕಿದೆ. ಆ ನಿಟ್ಟಿನಲ್ಲಿ ಶಾಸಕ ಬಸನಗೌಡ ದದ್ದಲ್ ಅವರ ಕೆಲಸಗಳು ಶ್ಲಾಘನೀಯ. ರಾಯಚೂರು ವಿಶ್ವವಿದ್ಯಾಲಯಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯ ಎಂದು ಎಂದು ನಾಮಕಾರಣ ಮಾಡುವಲ್ಲಿ ಬಸನಗೌಡರ ಕಾರ್ಯ ಮಹತ್ವದ ಕೊಡುಗೆಯಾಗಿದ್ದು, ಮುಂದಿನ ದಿನಗಳಲ್ಲಿ ಸಿರವಾರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಮೂರ್ತಿ ಸ್ಥಾಪನೆ ಕಾರ್ಯಕ್ಕೆ ಎಲ್ಲರ ಸಹಕಾರ ಅಗತ್ಯ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅ.ಕ.ವಾ.ನಾಯಕ ಮಹಾಸಭಾದ ಅಧ್ಯಕ್ಷ ಕಲ್ಲೂರು ಬಸವರಾಜ ನಾಯಕ, ಮುಖಂಡರಾದ ಕೃಷ್ಣ ನಾಯಕ, ಹುಲಿ ನಾಯಕ,ವೀರೆಶ ನಾಯಕ ,ಗೋಪಾಲ ನಾಯಕ ಹೊಸಮನಿ, ಗುಂಡಪ್ಪ ನಾಯಕ, ಅಪ್ಪಾಜಿ ನಾಯಕ, ರವಿ ನಾಯಕ, ಲಿಂಗಯ್ಯ ಸೈದಾಪೂರ, ರಾಕೇಶ ನಾಯಕ, ಬಸವ ಪೂಜಾರಿ, ರಮೇಶ ಗಡ್ಲ, ಗೋಪಾಲ ಹೊಸಮನಿ, ಸೂರಪ್ಪ ನಾಯಕ, ಮಲ್ಲು ನಾಯಕ, ಬಸವರಾಜ ಡಾಕ್ಟರ್, ದುರುಗಣ್ಣ ಮರಾಟ ಸೇರಿದಂತೆ ಅನೇಕರು ಇದ್ದರು.

## ಚಳಿಗಾಲ ಅಧಿವೇಶನದಲ್ಲಿ ಗ್ರಾಮ ಪಂಚಾಯತಿ ನೌಕರರ ಬೇಡಿಕೆ ಈಡೇರಿಸದಿದ್ದಲ್ಲಿ ಡಿ.21 ಅನಿರ್ದಿಷ್ಟ ಚಳುವಳಿ–

❑ ನೈಜ್ಯ ದೆಸೆ ನ್ಯೂಸ್

ಚಳಿಗಾಲ ಅಧಿವೇಶನದಲ್ಲಿ ಗ್ರಾಮ ಪಂಚಾಯತಿ ನೌಕರರ ಬೇಡಿಕೆ ಈಡೇ–ರಿಸದಿದ್ದಲ್ಲಿ ಡಿ.21 ಅನಿರ್ದಿಷ್ಟ ಚಳುವಳಿ– ಗ್ರಾಮ ಪಂಚಾಯತಿ ನೌಕರದ ಬೇಡಿಕೆಗಳನ್ನು ಡಿ.8 ರಂದು ನಡೆಯುವ ಚಳಿಗಾಲ ಅಧಿವೇ ಶನದಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರಬೇಕು ಸರಕಾರ ಬೇಡಿಕೆ ಈಡೇರಿ ಸದಿದ್ದಲ್ಲಿ ಡಿ.21 ರಂದು ಬೆಂಗಳೂರು ಅನಿರ್ದಿಷ್ಟ ಚಳುವಳಿ ನಡೆಸಲಾಗು ವುದು ಎಂದು ಗ್ರಾಮ ಪಂಚಾಯತಿ ರಾಜ್ಯಾಧ್ಯಕ್ಷರಾದ



ಎಂ. ಡಿ ನಾಡ ಗೌಡ ಅವರು ಹೇಳಿದರು. ಅವರಿಂದು ನಗರದ ಸುದ್ದಿ ಗಾರರೊಂದಿಗೆ ಮಾತನಾಡುತ್ತಾ, ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳನ್ನು ಚಳಿಗಳ ಆದೇಶದಲ್ಲಿ ಚರ್ಚಿಸುವಂತೆ ಈಗಾಗಲೇ ರಾಜ್ಯದ ಎಲ್ಲಾ ಶಾಸಕರಿಗೆ ಮತ್ತು ಎಂ ಎಲ್ ಸಿ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದರು ರಾಜ್ಯದಲ್ಲಿ ಸುಮಾರು 63 ಸಾವಿರ ಗ್ರಾಮ ಪಂಚಾಯತ ನೌಕ ರರು, ಕರ ವಸೂಲಿಗಾರರಾಗಿ, ಕ್ಲರ್ಕ ಕಂ ಡಾಟಾ ಎಂಟ್ರಿ ಅಪರೇಟ ರಗಳಾಗಿ, ಸ್ವಚ್ಛತಾಗಾರರು, ಸಿಪಾಯಿ ಮತ್ತು ವಾಟರಮನ್ ಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.ಪಂಚಾಯತ್ ಮಟ್ಟದಲ್ಲಿ ಸ್ವಚ್ಛವಾಹಿನಿ ನೌಕರರು ಎಂದು ಸರಕಾರ ತರಬೇತಿ ನೀಡಿ ಸಂಜೀವಿನಿ ಒಕ್ಕೂಟದಿಂದ ನೇಮ ಕಾತಿ ಮಾಡಿಕೊಂಡು ಗುತ್ತಿಗೆ ಆಧಾ ರದಲ್ಲಿ ಗುಲಾಮರಂತೆ ದುಡಿಸಿಕೊ ಳ್ಳುತ್ತಿದ್ದಾರೆ. ಸರಕಾರ ಇವರಿಗೆ ಪಂ ನೌಕರರು ಎಂದು ಪರಿಗಣಿಸಬೇಕು ಮತ್ತು ಒಂದು ನಿಗದಿತ ವೇತನ ನೀಡಬೇಕು ಎಂಬುದು ನೌಕರರ ಬೇಡಿಕೆ ಆಗಿದೆ ಎಂದರು

## *ರಾಯಚೂರು ಜಿಲ್ಲಾಡಳಿತದಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಯ ತರಗತಿಗಳು ಯಶಸ್ವಿ ಆರಂಭ*

❑ ನೈಜ್ಯ ದೆಸೆ ನ್ಯೂಸ್

ರಾಯಚೂರು ನವೆಂಬರ್ 23 (ಕರ್ನಾಟಕ ವಾರ್ತೆ): ರಾಯಚೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥ–ಾಲಯ ಇಲಾಖೆ ಇವರ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಉಚಿತ ತರಬೇತಿಯ ತರಗತಿಗಳು ನವೆಂಬರ್ 22 ರಿಂದ ಯಶಸ್ವಿಯಾಗಿ ಆರಂಭವಾದವು. ತರಬೇತಿಯ ಮೊದಲ ದಿನವಾದ ನವೆಂಬರ್ 22ರಂದು ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು, ತರಬೇತಿಗೆ ಆಯ್ಕೆಯಾದ 120 ವಿದ್ಯಾರ್ಥಿಗಳೊಂದಿಗೆ ನೇರ ಸಂವಹನ ನಡೆಸಿದರು. ರಾಯಚೂರು ಜಿಲ್ಲೆ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿರುವ ವಿದ್ಯಾರ್ಥಿಗಳೊಂದಿಗೆ



ಅವರು ಮಾತನಾಡಿ ತರಬೇತಿಯ ಅವಧಿ, ತರಬೇತಿಯ ಪಾಠಗಳು, ತರಬೇತಿಯ ಪ್ರತಿದಿನದ ಸಮಯ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಚರ್ಚಿಸಿದರು. ತರಬೇತಿಯ ನೋಡಲ್ ಅಧಿಕಾ–ರಿಗಳು ಆಗಿರುವ ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಪ್ರವೀಣ–ಕುಮಾರ, ವಿವಿಧ ಸಮಿತಿಯಲ್ಲಿರುವ ಅಧಿಕಾ–ರಿಗಳಾದ ಜಿಲ್ಲಾ ಗ್ರಂಥಾಲಯ ಇಲಾಖೆಯ ಅಧಿಕಾರಿಗಳಾದ ಡಾ.ಕಲಾಲ, ನಿರ್ಮಲಾ ಹೆಚ್ ಹೊಸೂರ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಈರೇಶ್ ನಾಯಕ, ಆಹಾರ ಇಲಾಖೆಯ ಅಧಿಕಾರಿ ನಜೀರ್ ಅಹ್ಮದ್, ಹಟ್ಟಿ ಚಿನ್ನದ ಗಣಿ ಕಂಪನಿಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಕೃಷ್ಣ ಶಾವಂತಗೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ಇಲಾಖೆಯ ಚಂದಪ್ಪ, ಅರಣ್ಯ ಇಲಾಖೆಯ ಮಹೇಂದ್ರ ಸೇ–ರಿದಂತೆ ಇನ್ನಿತರರು ಉಪಸ್ಥಿತರಿದ್ದು ತರಗತಿಯ ಆರಂಭದ ಪ್ರಕ್ರಿಯೆಯ ಬಗ್ಗೆ ಸಮನ್ವಯ ನಡೆಸಿದರು. ನವೆಂಬರ್ 22ರಂದು ಬೆಳಗ್ಗೆ ವಿದ್ಯಾರ್ಥಿಗಳೊಂದಿಗೆ ನೇರ ಸಂವಹನದ ನಂತರ ತರಬೇತಿಯು ಆರಂಭವಾಯಿತು. ಮೊದಲ ದಿನ ನವೆಂಬರ್ 22ರಿಂದ ಭಾರತೀಯ ಸಂವಿಧಾನ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಶರಣು ಭಾಗೂರ ಅವರು ತರಗತಿ ಆರಂಭಿಸಿದರು. ನವೆಂಬರ್ 23ರಂದು ಸಹ ಪಾಠಗಳು ನಡೆದವು. ನವೆಂಬರ್ 24 ಮತ್ತು ನವೆಂಬರ್ 25ರಂದು ಸಹ ಭಾರತೀಯ ಸಂವಿಧಾನದ ವಿಷಯದ ಮೇಲೆ ಪಾಠಗಳು ನಡೆಯಲಿವೆ. ನವೆಂಬರ್ 26 ರಿಂದ ನಾಲ್ಕು ದಿನಗಳ ಕಾಲ ಸಾಮಾನ್ಯ ವಿಜ್ಞಾನ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ನಿರಂಜನ ಮೂರ್ತಿ ಟಿ ಅವರು ಪಾಠ ಮಾಡಲಿದ್ದಾರೆ. ನವೆಂಬರ್ 30 ರಿಂದ ಡಿಸೆಂಬರ್ 3ರವರೆಗೆ ಅರ್ಥಶಾಸ್ತ್ರ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಸುನೀಲ್ ರಾಠೋಡ್ ಅವರು ಪಾಠ ಮಾಡಲಿದ್ದಾರೆ. ಡಿಸೆಂಬರ್ 4 ರಿಂದ ಡಿಸೆಂಬರ್ 7ರವರೆಗೆ ಭೂಗೋಳಶಾಸ್ತ್ರ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಅನಿಲ್ ಅವರು ಪಾಠ ಮಾಡಲಿದ್ದಾರೆ. ಡಿಸೆಂಬರ್ 8 ರಿಂದ 11ರವರೆಗೆ ಮಾನಸಿಕ ಸಾಮರ್ಥ್ಯ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಗಿರೀಶ್ ಅವರು ಪಾಠ ಮಾಡಲಿದ್ದಾರೆ. ಜಿಲ್ಲಾಧಿಕಾರಿಗಳ ಮನವಿ: ಪ್ರತಿಭೆಯು ಪ್ರತಿಯೊಬ್ಬರಲ್ಲೂ ಇರುತ್ತದೆ. ಪರಿಸರ ಮತ್ತು ಪ್ರಯತ್ನದಿಂದ ಗುರಿ ಸಾಧನೆ, ಯಶಸ್ಸು ಸಾಧ್ಯವಾಗುತ್ತದೆ. ರಾಯಚೂರು ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ, ಕಲಬುರಗಿ, ಬೀದರ, ಬಳ್ಳಾರಿ, ವಿಜಯನಗರ, ಕೊಪ್ಪಳ

4ನೇ ಪುಟಕ್ಕೆ

## ಶಿಕ್ಷಣ ಮಾರ್ಗದರ್ಶಿ ವಿಶೇಷ

## MD ರೇಡಿಯಾಲಜಿ

ರೇಡಿಯಾಲಜಿ (MD Radiology) ಎನ್ನುವುದು 3 ವರ್ಷಗಳ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಆಗಿದ್ದು, ಇದು ರೋಗನಿರ್ಣಯಕ್ಕಾಗಿ ಇಮೇಜಿಂಗ್ ತಂತ್ರಗಳಾದ ಘಿ-ಕಿರಣಗಳು, ಅಖಿ, ಒಖಖ, ಮತ್ತು ಅಲ್ಟ್ರಾಸೌಂಡ್‌ಗಳನ್ನು ಬಳಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಅರ್ಹತೆಗಾಗಿ, MBBS ಪದವಿ ಮತ್ತು ಕನಿಷ್ಠ 50% ಅಂಕಗಳೊಂದಿಗೆ ಒಂದು ವರ್ಷದ ಇಂಟರ್ನ್‌ಶಿಪ್ ಪೂರ್ಣಗೊಳಿಸಿರಬೇಕು, ಮತ್ತು ಓಇಇಖಿ-ಕಉ ನಂತಹ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಕೋರ್ಸ್‌ನ ವಿವರಗಳು

ಕೋರ್ಸ್‌ನ ಅವಧಿ: 3 ವರ್ಷಗಳು.

ಯಾವುದಕ್ಕೆ ಸಂಬಂಧಿಸಿದೆ: ಇದು ರೋಗನಿರ್ಣಯಕ್ಕಾಗಿ ಇಮೇಜಿಂಗ್ ತಂತ್ರಗಳನ್ನು ಬಳಸುವ ಮೆಡಿಕಲ್ ವಿಭಾಗವಾಗಿದೆ.

ಕೋರ್ಸ್‌ನಲ್ಲಿ ಒಳಗೊಂಡಿರುವ ವಿಷಯಗಳು:

ರೇಡಿಯೊ ಭೌತಶಾಸ್ತ್ರ (Radio Physics)

ಘಿ-ಕಿರಣಗಳು ಮತ್ತು ಇತರ ಇಮೇಜಿಂಗ್ ತಂತ್ರಗಳ ಬಳಕೆ

ಚಿತ್ರಗಳ ವ್ಯಾಖ್ಯಾನ (Image interpretation)

ರೇಡಿಯೊಗ್ರಫಿ (Radiography)

ವಿಕಿರಣ ಪತ್ತೆ ಮತ್ತು ಮಾಪನ (Radiation detection and measurement)

ರೋಗಗಳನ್ನು ಪತ್ತೆಹಚ್ಚಲು ಮತ್ತು ಚಿಕಿತ್ಸೆಯನ್ನು ಮೇಲ್ವಿಚಾರಣೆ ಮಾಡಲು ಇಮೇಜಿಂಗ್ ತಂತ್ರಗಳನ್ನು ಬಳಸುವ ಬಗ್ಗೆ ತರಬೇತಿ.

ಅರ್ಹತೆಗಳು

ಶೈಕ್ಷಣಿಕ ಅರ್ಹತೆ: ಭಾರತೀಯ ವೈದ್ಯಕೀಯ ಮಂಡಳಿಯಿಂದ (MCI) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಒಃಃಖ ಪದವಿ.

ಕನಿಷ್ಠ ಅಂಕಗಳು: ಒಃಃಖ ಪದವಿಯಲ್ಲಿ ಕನಿಷ್ಠ 50% ಅಂಕಗಳು.

ಇಂಟರ್ನ್‌ಶಿಪ್: ಕನಿಷ್ಠ ಒಂದು ವರ್ಷದ ಇಂಟರ್ನ್‌ಶಿಪ್ ಪೂರ್ಣಗೊಂಡಿರಬೇಕು.

ಪ್ರವೇಶ ಪರೀಕ್ಷೆ: NEET-PG ಯಂತಹ ಕಡ್ಡಾಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ವೃತ್ತಿಜೀವನದಅವಕಾಶಗಳು

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ರೇಡಿಯಾಲಜಿಸ್ಟ್ ಆಗಿ ಕೆಲಸ ಮಾಡಬಹುದು.

ಖಾಸಗಿ ವೈದ್ಯಕೀಯ ಸಂಸ್ಥೆಗಳು ಮತ್ತು ಆಸ್ಪತ್ರೆಗಳಲ್ಲಿ ನಿರ್ದೇಶಕರು ಅಥವಾ ವಿಭಾಗದ ಮುಖ್ಯಸ್ಥ (HOD) ಆಗಿ ನೇಮಕಗೊಳ್ಳಬಹುದು.

1ನೇ ಪುಟದಿಂದ....

1500 ರೂಪಾಯಿ ಗೌರವಧನ ನೀಡಬೇಕೆಂಬ ಆದೇಶ,ಶೇಖಡಾ 20% ರಷ್ಟು ಮಾತ್ರ ಅತಿಥಿ ಉಪನ್ಯಾಸಕರನ್ನು ಸೇವೆಗೆ ತೆಗೆದುಕೊಳ್ಳಬೇಕು ಅದೂ ಅಲ್ಪಾವಧಿಗೆ ಎಂಬ ಆದೇಶ,ಪಿ,ಎಫ್,ಆರೋಗ್ಯ ಯೋಜನೆ,ಭದ್ರತೆನೀಡಬೇಕೆಂಬ ಆದೇಶಗಳು ನ್ಯಾಯಾಲಯ ಮತ್ತು ಣರಂಥಿ ಗಳಿಂದಲೇ ಬಂದವುಗಳಲ್ಲವೇ? ಇವುಗಳನ್ನು ಪಾಲಿಸುತ್ತಿದ್ದೀರಾ? ಇಷ್ಟು ವರ್ಷ ಗಾಣದೆತ್ತಿನಂತೆ ದುಡಿಸಿಕೊಂಡು ವಯಸ್ಸಾದ ಪಶುವನ್ನು ಕಟುಕರಿಗೆ ನೀಡುವಂತೆ ವಯಸ್ಸಾದ ಹಿರಿಯ ಅತಿಥಿ ಉಪನ್ಯಾಸಕರನ್ನು ಬೀದಿಗೆ ಬಿಟ್ಟರೆ ಅವರನ್ನೇ ನಂಬಿದ ಕುಟುಂಬದ ಪಾಡೇನು? ಕಿಂಚಿತ್ತು ಕರುಣೆಯಿಲ್ಲವೇ? ಕೇರಳ,ಆಂದ್ರ,ದೆಹಲಿ,ಪಶ್ಚಿಮ ಬೆಂಗಾಲ್,ಮುಂತಾದ ರಾಜ್ಯಸರಕಾರಗಳಿಂದಾದ ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ ನೀಡುವ ಕೆಲಸ ಕರ್ನಾಟಕ ರಾಜ್ಯದಿಂದ ಏಕೆ ಆಗುತ್ತಿಲ್ಲ? ಕರ್ನಾಟಕಕ್ಕೆ ಬೇರೆ ಸಂವಿಧಾನವಿದೆಯೇ? ಅಥವಾ ಸಾವಿರಾರು ಅತಿಥಿ ಉಪನ್ಯಾಸಕರ ಮೇಲೆ ನಿಮಗೆ ದ್ವೇಷವಿದೆಯೇ? ಎಂದು ತೂಗುಗತ್ತಿಯ ಬುಡದಲ್ಲಿನಿಂತ ಅತಿಥಿ ಉಪನ್ಯಾಸಕರು ಪ್ರಶ್ನಿಸುತ್ತಿದ್ದಾರೆ. ಹೌದು ಅಹಿಂದದ ಹರಿಕಾರ,ಭಾಗ್ಯಗಳ ಸರದಾರ,ಗ್ಯಾರೆಂಟಿಗಳ ಸೂತ್ರದಾರ ಸಿದ್ದರಾಮಯ್ಯನವರು ವಿರೋಧಪಕ್ಷದಲ್ಲಿದ್ದಾಗ ಬಿ,ಜೆ,ಪಿಯವರಿಗೆ ಮೇಜುಗುದ್ದಿ ಕೇಳಿದರು ,ಆರ್, ತಿದ್ದುಪಡಿಮಾಡಿ ಭದ್ರತೆ ನೀಡಬಹುದಲ್ವಾ ನಿಮಗೆ ಇಚ್ಛಾಶಕ್ತಿಯಿಲ್ಲ ಎಂದು ಗುಡುಗಿದವರ ಕೈ ಈಗ್ಯಾಕೆ ನಡುಗುತ್ತಿದೆ. ಬರೀ ನಿಮ್ಮ ಘರ್ಜನೆ ಭಾಷಣದಲ್ಲಿ,ವಿರೋಧಪಕ್ಷದಲ್ಲಿದ್ದಾಗ ಮಾತ್ರಾನಾ? ಸಿದ್ದರಾಮಯ್ಯನವರೇ ದಯವಿಟ್ಟು ಸಾವಿರಾರು ಅತಿಥಿ ಉಪನ್ಯಾಸಕರಬಾಳಿಗೆ ಭದ್ರತೆ ನೀಡಿ ಬೆಳಕಾಗಿ,ನಮ್ಮನ್ನು ಹೊರಹಾಕಿ ಸುಡುವ ಬೆಂಕಿಯಾಗಬೇಡಿ ಎಂದು ಅತಿಥಿ ಉಪನ್ಯಾಸಕರು ಮನವಿಮಾಡಿಕೊಳ್ಳುತ್ತಿದ್ದಾರೆ. ಅತಿಥಿ ಉಪನ್ಯಾಸಕರ ಪಾಲಿನ ಕಣ್ಮಣಿ,ಹನುಮಂತಗೌಡ ಕಲ್ಮನಿಯವರು ಹೋರಾಟದ ಪಾಂಚಜನ್ಯ ಮೊಳಗಿಸಿದ್ದಾರೆ ನಮ್ಮ ನ್ಯಾಯೋಚಿತವಾದ ಬೇಡಿಕೆಗಳನ್ನು ಈಡೇರಿಸಿ.

ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 900878758

# ಎಸ್.ಡಿ.ಎಮ್.ಸಿ ಅಧ್ಯಕ್ಷರಾಗಿ ಶರಣಬಸವ, ಉಪಾಧ್ಯಕ್ಷರಾಗಿ ಪವಿತ್ರ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್



ಸಿಂಧನೂರು:ನ.23- ತಾಲೂಕಿನ ತಿಡಿಗೋಳ ಕ್ಯಾಂಪ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೂತನ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಮ್.ಸಿ) ಅಧ್ಯಕ್ಷ -ಉಪಾಧ್ಯಕ್ಷರ,ಸದಸ್ಯರ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ಶರಣಬಸವ ಮುದುಗಲ್,ಉಪಾಧ್ಯಕ್ಷರಾಗಿ ಪವಿತ್ರ ಗಂಡ ಮಹಾಂತೇಶ್, ಗೌರವಾಧ್ಯಕ್ಷರಾಗಿ ಶರಣಪ್ಪ ಕನಸಾವಿ ಮತ್ತು ಸದಸ್ಯರಾಗಿ ಬಸಣ್ಣತಂಹನುಮಂತ,ಹನುಮಂತ ತಂ ತಿಪ್ಪಣ್ಣ, ಸೀನಮ್ಮ ಗಂ ಕುಬಣ್ಣ.ಅನ್ನಪೂರ್ಣ ಗಂಡ ಕಾಮಣ್ಣ, ಹನುಮೇಶ ಹೂಗಾರ್,ಗುರಪ್ಪಹೂಗಾರ್ ನೀಲಮ್ಮ ಗಂ ಬಸವರಾಜ್,ಲಲಿತಾ ಗಂ ಚಂದ್ರಶೇಖರ್,ವೀರೇಶ್ ತಂತಿಮ್ಮಪ್ಪ,ಬಸವರಾಜ್ ತಂ ವೆಂಕನಗೌಡ,ಮಲ್ಲಣ್ಣ ತಂ ಶಿವನಪ್ಪ,ಪಂ ಪಣ್ಣಲಮಾಣಿ,ಹನುಮಂತ ನಾಗಪ್ಪ,ಯಂಕಪ್ಪ ವಡ್ಡರ್, ಈರಮ್ಮ ಹರಿಶ್ಚಂದ್ರ,ಕವಿತಾ ಹನುಮೇಶ್ ಆಯ್ಕೆಯಾಗಿದ್ದಾರೆ. ನಾಮನಿರ್ದೇಶತ ಸದಸ್ಯರಾಗಿ ಆನಂದ್ ಗೊರಬಾಳ,ವಿರುಪಣ್ಣ,ಕು. ರಕ್ಷಿತಾ ಕನಕಪ್ಪ ಪದ ನಿಮಿತ್ತ ಸದಸ್ಯರಾಗಿ, ಶಿವಮ್ಮ ಗಂ ನಾಗರಾಜ್ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಸಿಆರ್‌ಪಿ ಶಾಂತಯ್ಯ ಹಿರೇಮಠ, ಹನುಮೇಶ್ ಭಂಗಿ ಹಾಗೂ ಮುಖ್ಯೋಪಾಧ್ಯಾಯ ಆನಂದ್ ಗೊರಬಾಳ್ ಅತಿಥಿ ಶಿಕ್ಷಕ ಯಮನಪ್ಪ ಊರಿನ ಮುಖಂಡರು ಮತ್ತು ಪಾಲಕರು,ಹಾಗೂ ಶಿಕ್ಷಣ ಪ್ರೇಮಿಗಳು ಮತ್ತು ಹಳೆ ವಿದ್ಯಾರ್ಥಿಗಳು ಇದ್ದರು.

ಸನ್ಮಾನ : ಜಿಲ್ಲೆಯ ಅಖಂಡ ಕರ್ನಾಟಕ ಕಾರ್ಯಾಧ್ಯಕ್ಷ ಗುಂಡಪ್ಪ ಹೂಗಾರ ನೂತನ ಎಸ್.ಡಿ.ಎಮ್.ಸಿ ಪದಾಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಿದರು. ವಿಶ್ವನಾಥ ಮಸ್ಕಿಮಠ,ನಾಗರಾಜ ನವಲಿ,ಶರಣಪ್ಪಕನ ಸಾವಿ,ಹನುಮೇಶ ಗದ್ದಿ ಉಪಸ್ಥಿತರಿದ್ದರು.

# ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘವು ಬಾಕಿ ವೇತನ, ಇಎಸ್‌ಐ, ಇಪಿಎಫ್ ಪಾವತಿಗಾಗಿ ಅಧಿಕಾರಿಗಳಿಗೆ ಮನವಿ



❏ ನೈಜ್ಯ ದೆಸೆ ನ್ಯೂಸ್

ರಾಯಚೂರು:ನ.22- ಕರ್ನಾಟಕ ನೀರಾವರಿ ನಿಗಮಕ್ಕೆ ಸೇರಿದ ತುಂಗಭದ್ರಾ ನೀರಾವರಿ ಕಾರ್ಮಿಕರ ವೇತನವನ್ನು ಪಾವತಿಸುವಂತೆ ಒತ್ತಾಯಿಸಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ಕೇಂದ್ರ ಸಮಿತಿಯು ಶುಕ್ರವಾರ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದೆ. ಯರಮರಸ್ ವೃತ್ತದ ಯರಮ ರಸ್, ಕಲ್ಲೂರು, ಆರ್‌ಡಿಎಸ್, ಸಿರವಾರ, ಮಾನ್ವಿ, ಮಸ್ಕಿ, ಸಿಂಧನೂ ರು, ಜವಳಗೇರಾ, ತುರವಿಹಾಳ ಉಪ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ವೇತನ ಪಾವತಿಸದೆ ವಿಳಂಬ ಮಾಡಲಾಗಿದೆ. ಆದ್ದರಿಂದ, ಅವರಿಗೆ ಕಾರ್ಮಿಕರಿಗೆ 5 ತಿಂಗಳಿನಿಂದ ಬಾಕಿ ತಕ್ಷಣವೇ ವೇತನ ಪಾವತಿಸುವಂತೆ ಒತ್ತಾಯಿಸಲಾಯಿತು. ಟೆಂಡರ್ ನಿಯಮಗಳ ಪ್ರಕಾರ ಆರೋಗ್ಯವನ್ನು ಲೆಕ್ಕಿಸದೆ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ವೇತನ ಪಾವತಿಸದ ಸಂಬಂಧ ಇಲಾಖೆಯ ಅಧಿಕಾರಿಗಳ ವಿರುದ್ಧ ಮತ್ತು ಟೆಂಡರ್ ಪಡೆದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು. 1936 ರ ವೇತನ ಪಾವತಿ ಕಾಯ್ದೆಯ ಸೆಕ್ಷನ್ 5 ರ ಪ್ರಕಾರ, ಪ್ರತಿ ತಿಂಗಳ 7 ನೇ ತಾರೀಖಿನ ಮೊದಲು ವೇತನ ಪಾವತಿಸಬೇಕು. ಆದರೆ ಕಾರ್ಮಿಕರಿಗೆ 5 ತಿಂಗಳಿನಿಂದ ಸಂಬಳ ಪಾವತಿಸಿಲ್ಲ. ಬಾಕಿ ಇರುವ ಎಲ್ಲಾ ವೇತನ, ಇಎಸ್‌ಐ, ಇಪಿಎಫ್ ಮತ್ತು ಇತರ ಸೌಲಭ್ಯಗಳನ್ನು ತಕ್ಷಣ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ, ನಾಗಲಿಂಗಸ್ವಾಮಿ, ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಬಸವರಾಜ್, ಎಐಸಿಸಿಟಿಯು ಜಿಲ್ಲಾಧ್ಯಕ್ಷ ಅಜೀಜ್ ಜಾಗೀರದಾರ್, ಭೀಮಣ್ಣ, ಜಗದೀಶ್, ನಿಸಾರ್ ಅಹ್ಮದ್, ಜಿಲಾನಿ ಪಾಷಾ.ಬಸವರಾಜ್ ಎಂ. ಸೇರಿದಂತೆ ಹಲವರು ಉಪಸ್ಥಿತರಿದ್ದರು

# ವಿದ್ಯಾರ್ಥಿಗಳ ಕಲಿಕೆಗೆ ಎಲ್ಲಾ ಸಹಕಾರ ಪಿಡಿಒ ವೆಂಕಟೇಶ ಗುತ್ತೇದಾರ್

❏ ನೈಜ್ಯ ದೆಸೆ ನ್ಯೂಸ್



ದೇವದುರ್ಗ.ನ.23-ಅಂಗನವಾಡಿ, ಶಾಲೆಗಳಲ್ಲಿ ಮಕ್ಕಳ ಕಲಿಕೆಗಬೇಕಾದ ಅಗತ್ಯ ಸೌಲಭ್ಯ ಒದಗಿಸಲು ಗ್ರಾಪಂನಿಂದ ಎಲ್ಲ ಸಹಕಾರ ನೀಡಲಾಗುವುದು ಎಂದು ಪಿಡಿಒ ವೆಂಕಟೇಶ ಗುತ್ತೇದಾರ್ ಹೇಳಿದರು. ತಾಲೂಕಿನ ಅಮರಾಪುರ ಗ್ರಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಮಕ್ಕಳ ಗ್ರಾಮಸಭೆ ಉದ್ಘಾಟಿಸಿ ಶನಿವಾರ ಮಾತನಾಡಿದರು. ಅಂಗನವಾಡಿ ಕೇಂದ್ರ, ಶಾಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ವಿವಿಧ ಸೌಲಭ್ಯ ಕಲ್ಪಿಸಲಾಗುತ್ತಿದೆ. ಕಟ್ಟಡ ನಿರ್ಮಾಣ, ಶೌಚಗೃಹ, ಇಂಗುಗುಂಡಿ, ಕುಡಿವ ನೀರಿನ ಸೌಲಭ್ಯ, ಕಾಂಪೌಂಡ್ ನಿರ್ಮಾಣ, ಮೈದಾನ ಸ್ವಚ್ಛತೆಗೆ ಅವಕಾಶವಿದೆ. ವಿದ್ಯಾರ್ಥಿಗಳ ಕಲಿಕೆಗೆ ಬೇಕಾದ ಮೂಲಸೌಲಭ್ಯ ಕಲ್ಪಿಸಲು ಗ್ರಾಪಂ ಸದಾಸಿದ್ಧವಿದೆ. ಇದನ್ನು ಮಕ್ಕಳು ಹಾಗೂ ಪಾಲಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.ಗ್ರಾಪಂ ಅಧ್ಯಕ್ಷ ಭೀಮಣ್ಣ ಗುಮೇದಾರ್, ತಾಲೂಕು ಸಂಯೋಜಕ ಗಂಗಾಧರ. ಶಿಕ್ಷಕ ಸಿದ್ದನಗೌಡ. ಅಮರೇಶ, ಗಂಗಾರೆಡ್ಡಿ, ಮಹಿಳಾ ಒಕ್ಕೂಟದ ರಸದಸ್ಯರ ಸದಸ್ಯ ರಾಮಲಿಂಗಮ್ಮ ಇತರರಿದ್ದರು.

03 ನೇ ಪುಟದಿಂದ....



ಭಾಗದ ವಿದ್ಯಾರ್ಥಿಗಳು ಯಾವುದೇ ಸಾಧನೆಯಲ್ಲಿ ಹಿಂದೆ ಉಳಿದಿಲ್ಲ. ಬಡತನ, ತಿಳಿವಳಿಕೆ ಕೊರತೆಯಿಂದ ಹಿಂದೆ ಬೀಳುವ ರಾಯಚೂರು ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಪರಿಸರ ಮೂಡಿಸುವ ನಿಟ್ಟಿನಲ್ಲಿ ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಬಾವಿ ಉಚಿತ ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಈ ತರಬೇತಿಗೆ ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳು ತರಬೇತಿ ಪೂರ್ಣವಾಗುವವರೆಗೆ ಸಕ್ರಿಯ ಭಾಗಿಯಾಗಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮನವಿ ಮಾಡಿದ್ದಾರೆ. ಸಹಾಯಕ ಆಯುಕ್ತರ ಮನವಿ: ರಾಯಚೂರು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಆಯೋಜನೆ ಮಾಡಿರುವ ಈ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಯ ಕಾರ್ಯಕ್ರಮವನ್ನು ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಆಯೋಜನೆ ಮಾಡಿದೆ. ಈ ಕಾರ್ಯಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು ವಿಶೇಷ ಕಾಳಜಿ ವಹಿಸಿ ನಾನಾ ಸಮಿತಿಗಳನ್ನು ರಚಿಸಿ ಹಲವು ದಿನಗಳಿಂದ ಮಾರ್ಗದರ್ಶನ ಮಾಡಿದ್ದಾರೆ. ತಹಸೀಲ್ದಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪ್ರಶ್ನೆ ಪತ್ರಿಕೆ ತಯಾರಿಸುವುದು, ಪಾರದರ್ಶಕವಾಗಿ ಪರೀಕ್ಷೆ ನಡೆಸುವುದು, ತರಬೇತಿಗಳ ಹಾಲ್ ಸಿದ್ಧಪಡಿಸುವುದು ಸೇರಿದಂತೆ ಹತ್ತಾರು ಮಹತ್ವದ ಕಾರ್ಯಗಳನ್ನು ತಿಂಗಳುಗಟ್ಟಲೇ ನಿರಂತರ ನಡೆಸಿ ಶ್ರಮಿಸಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳು ತಪ್ಪದೇ ತರಗತಿಗೆ ಹಾಜರಾಗಿ ತರಬೇತಿ ಪಡೆದುಕೊಂಡಲ್ಲಿ ಜಿಲ್ಲಾಡಳಿತದ ಕಾರ್ಯಕ್ಕೆ ಅರ್ಥ ಬರಲಿದೆ ಎಂದು ತರಗತಿಗೆ ಹಾಜರಾಗಲು ಅಭ್ಯರ್ಥಿಗಳಲ್ಲಿ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಮನವಿ ಮಾಡಿದ್ದಾರೆ.

# ಜೀವಜಲ: ಬರಿದಾಗುತ್ತಿರುವ ಚೈತನ್ಯದ ಚಿಲುಮೆ

❏ ನೈಜ್ಯ ದೆಸೆ ನ್ಯೂಸ್ ಲೇಖನ

ನಲ್ಲಿಯಲ್ಲಿ ತೊಟ್ಟಿಕ್ಕುತ್ತಿರುವ ನೀರು, ಕೆರೆಯ ಇಕ್ಕೆಲದಲ್ಲಿ ಬಟ್ಟೆ ಒಗೆಯುತ್ತಿರುವ ಹೆಂಗಳೆಯರು, ನೀರಿನ ಜೊತೆಗೆ ಮಕ್ಕಳ ಆಟ. ಕಾಲುವೆಯ ಬದಿ ವಾಹನಗಳನ್ನು ತೊಳೆಯುತ್ತಿರುವ ಜನ. ಇದು ಸಾಮಾನ್ಯ ಜನರ ಕಣ್ಣೆದುರಿನ ಚಿತ್ರಣ. ಈ ಎಲ್ಲ ಮೇಲಿನ ಪ್ರಕ್ರಿಯೆಗೆ ಮತ್ತು ದಿನನಿತ್ಯದ ಬಳಕೆಗೆ ನೀರನ್ನು ಹೇರಳವಾಗಿ ಉಪಯೋಗಿಸಲಾಗುತ್ತಿದೆ. ಈ ರೀತಿಯಾದ ಅಪಾರ ಪ್ರಮಾಣದ ನೀರಿನ ಉಪಯೋಗದಿಂದ ಮುಂದೆ ಆಗಬಹುದಾದ ಪರಿಣಾಮದ ಬಗ್ಗೆ ಮಾತ್ರ ನಮಗೆ ಅರಿವಿಲ್ಲದಿರುವದು ಅತ್ಯಂತ ಶೋಚನೀಯ. ಬಿರು ಬೇಸಿಗೆ ಶುರುವಾಗಿದೆ. ಸಾಕಪ್ಪಾ ಸಾಕು ಎನ್ನುವಷ್ಟರ ಮಟ್ಟಿಗೆ ಬಿಸಿಲಿನ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ಬುದ್ದಿಜೀವಿಗಳ ಪ್ರಕಾರ ವರ್ಷದಿಂದ ವರ್ಷಕ್ಕೆ ಬಿಸಿಲಿನ ಪ್ರಮಾಣ ಹೆಚ್ಚಾಗಲು ಜಾಗತಿಕ ತಾಪಮಾನವೇ ಕಾರಣ ಎನ್ನಲಾಗುತ್ತಿದೆ. ಅಕ್ಷರಷಃ ನಿಜ ಕೂಡ. ಯಾವುದೇ ಬಡಲಾವಣೆಗಳಿರಲಿ ತನ್ನ ಪಾಡಿಗೆ ತಾನು ಆಗುತ್ತಲೇ ಇರುತ್ತದೆ. ಅದು ನಿಯಮ. ಆದರೆ ಅದಕ್ಕೆ ತಕ್ಕ ಬದಲಾವಣೆಗೆ ನಾವು ಸಿದ್ಧರಿರುವದಿಲ್ಲ. ಬೇಸಿಗೆಯ ವಿಚಾರದಲ್ಲಿಯೂ ಸಹ ಅದೇ ಧೋರಣೆ. ಅದೇ ರೀತಿಯಾಗಿ ಮತ್ತೊಂದು ಕಡೆ ಅಂತರ್ಜಲ ಮಟ್ಟವೂ ಸಹ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ನೆಲದ ನೀರಿನ ಪಸೆಯೂ ಆರಿ ಹೋಗುತ್ತದೆ ಎಂಬುದೂ ಗೊತ್ತಿರದ ಸಂಗತಿಯೇನಲ್ಲ. ಆದರೂ ಅದಕ್ಕೆ ತಕ್ಕನಾದ ಸಿದ್ಧತೆ ನಾವು ಮಾಡಿಕೊಳ್ಳುವದಿಲ್ಲ. ಅರಿ ಹೋಗುವ ಮುನ್ನ ಒಂದಷ್ಟು ನೀರನ್ನು ಬಾಯಾರಿ ಬಂದಾಗ ಬೇಕಾಗುತ್ತದೆಯೆಂದು ಸಂರಕ್ಷಿಸಿ ಇಟ್ಟುಕೊಳ್ಳುವ ಜಾಯಿಮಾನದವರಲ್ಲ ನಾವು ಏನಾದೀತು..? ಎಲ್ಲರಿಗಾದದ್ದು ನಮಗಾಗುತ್ತದೆ ಎಂಬ ಅಸಡ್ಡೆ ಬೇರೆ. ಹೀಗಾಗಿ ನೀರಿದ್ದಾಗ ಅದನ್ನು ಬೇಕಿರಲಿ, ಬೇಡದಿರಲಿ ಬಳಸುತ್ತೇವೆ ಎನ್ನುವದಕ್ಕಿಂತ ನೀರನ್ನು ಕಬಳಿಸುತ್ತಿದ್ದೆವೆ ಎನ್ನಬಹುದು.

ನೀರನ್ನು ಉಳಿಸಿಕೊಂಡರೆ ಅದು ಕೇವಲ ನೀರಿನ ಉಳಿವು ಮಾತ್ರವಲ್ಲ, ಕಿಸೆಯ ಕಾಸು ಉಳಿಸಿದಂತೆ, ನೆಲದ ಸಮೃದ್ಧಿ ಕಾಪಾಡುತ್ತದೆ. ಸುತ್ತಲಿನ ಬಾವಿ, ಕೆರೆ, ಕಟ್ಟೆ, ನದಿ, ನೆಲೆ ಅಷ್ಟೇ ಯಾಕೆ ಕೊನೆಗೆ ಒಂದಿಡೀ ಸಮಾಜದ ಉಳಿವು ಸಹ ನಾವು ಬಳಸುವ, ಉಳಿಸುವ ನೀರನ್ನು ಅವಲಂಭಿಸಿರುತ್ತದೆ. ಮುಂದಿನ ತಲೆಮಾರಿಗೆ ಆಸ್ತಿ ಸಂಪಾದಿಸದಿದ್ದರೂ ನಿಮ್ಮ ಮಕ್ಕಳು. ಮೊಮ್ಮಕ್ಕಳು ಬದುಕುತ್ತಾರೆ. ಆದರೆ ನೀರಿನ ಆಕರವನ್ನು ಉಳಿಸಿ ಸಂರಕ್ಷಿಸದಿದ್ದರೆ...?? ನೀರನ್ನು ಎರಡು ರೀತಿಯಲ್ಲಿ ಸಂರಕ್ಷಣೆ ಮಾಡಬಹುದಾಗಿದೆ. ಒಂದು ನೀರನ್ನು ಇತಿ-ಮಿತಿಯಾಗಿ ಬಳಸುವದು.ಇದಕ್ಕಿಂತ ಪ್ರಮುಖವಾದುದ್ದೆಂದರೆ ನೀರನ್ನು ಮಾಲಿನ್ಯವಾಗದಂತೆ ಕಾಪಡುವದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನಮಗೆ ನೀರಿಲ್ಲ ಎಂದ ಮಾತ್ರಕ್ಕೆ ನೀರಿನ ಕೊರತೆಯಿದೆ ಎಂದಲ್ಲ. ಭೂಮಿಯ ಮುಕ್ಕಾಲು ಭಾಗ ನೀರಿನಿಂದ ಆವೃತವಾಗಿದ್ದರೂ ಸಹ ಅದು ಕೇವಲ ಉಪ್ಪು ನೀರು. ನಮಗೆ ಕುಡಿಯಲು ಶುದ್ಧ ನೀರು ಬೇಕೇ ಬೇಕು. ಸಿಗುವ ನೀರನ್ನು ಮಿತವಾಗಿ ಬಳಸಬೇಕು. ಏನೋ ಸರ್ಕಾರದವರು ಹೆಂಗೂ ನೀರು ಹರಿಸುವರಲ್ಲ ಎಂಬ ಬೇಕಾಬಿಟ್ಟಿ ಮನೋಭಾವದಿಂದ, ಅಸಡ್ಡೆ, ಉದಾಸೀನದಿಂದ ನೀರನ್ನು ಪೋಲು ಮಾಡುವವರು ನಾವೇ. ಊಟ ಇಲ್ಲದೆ ಹಲವು ದಿನ ಬದುಕಿರಬಹುದು ಆದರೆ, ನೀರು ಇಲ್ಲದೆ ಬಹಳ ದಿನ ಇರಲಾರೆವು. ಈ ಜಗತ್ತಿನಲ್ಲಿ ಜಾದೂ ಅಂತ ಏನಾದರು ಇದ್ದರೆ ಅದು ನೀರಿನಲ್ಲಿ ಮಾತ್ರ.

ಇನ್ನು ತೆರೆದ ಕೊಳವೆ ಬಾವಿಗಳಲ್ಲಿ ನೀರು ಬರಲಿಲ್ಲ ಎಂಬ ಕಾರಣಕ್ಕೆ ಅದನ್ನು ಮುಚ್ಚೋದೊಂದೆ ಪರಿಹಾರವಲ್ಲ. ಮಾಧ್ಯಮಗಳು ಕಂಡ ಕಂಡ ಕೊಳವೆಬಾವಿ ಮುಚ್ಚಿಸಲು ಲಕ್ಷಾಂತರ ರೂಪಾಯಿ ವ್ಯಯಿಸಬಹುದು.ಸಂಘಟನೆಗಳು ಕಲ್ಲು ಮುಚ್ಚಿ ಸುಮ್ಮನಗಬಹುದು. ಆದರೆ ಪಾಳು ಬಿದ್ದ ಕೊಳವೆಬಾವಿಗಳನ್ನು ಮುಚ್ಚುವದೊಂದೇ ಅದಕ್ಕೆ ಪರಿಹಾರವಲ್ಲ. ನಾವೇಕೆ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಇಂತಹ ಕೊಳವೆ ಬಾವಿಗಳನ್ನು ಬಳಸಬಾರದು? ಇಂತಹ ಕೊಳವೆಬಾವಿಗಳೇ ಭೂಮಿಗೆ ನೀರು ತುಂಬಿಸುವ ಸಾಧನವಾಗಿ ಬಳಸಬಹುದೆಂದು ಯಾರೂ ಯೋಚಿಸಲಿಲ್ಲ.ಕೊಳವೆ ಬಾವಿಗಳನ್ನ ಮಳೆನೀರಿನ ಇಂಗು ಗುಂಡಿಗಳನ್ನಾಗಿ ಮಾಡಿ ಮೇಲಿನಿಂದ ಭದ್ರವಾಗಿ ಮುಚ್ಚಿದರೆ ಆಯಿತು. ಇದರಿಂದ ಅಂತರ್ಜಲ ಮಟ್ಟ ಕೊಂಚ ಏರಬಹುದು. ಜಲ " ಬರಿ ಇದು ಜಲ ಅಲ್ಲ, ಇದು ಜೀವಜಲ, ಹುಮ್ಮಸ್ಸು, ಚೈತನ್ಯದ ಚಿಲುಮೆ, ಶಕ್ತಿ-ಸ್ಫೂರ್ತಿ ತುಂಬುವ ಸೆಲೆ ಎಂದು ಅರಿವಾಗುವ ದಿನ ಸನ್ನಿಹಿತವಾಗಿದೆ. ಸಮಾಜದ ಪ್ರತಿಯೊಬ್ಬರೂ, ಶಿಶುವಿನಿಂದ-ವಯೋವೃದ್ಧರವರೆಗೆ ಜಾಗರೂಕತೆ ವಹಿಸಿ ನೀರನ್ನು ಪೋಲು ಮಾಡದೇ ಬಳಸಿದರೆ ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ಚೆನ್ನಾಗಿರುತ್ತದೆ. ಇಲ್ಲವಾದರೆ ಪೆಟ್ರೋಲ್, ಡೀಸಲ್ಕಂತೆಯೇ ನೀರನ್ನೂ ಸಹ ಆಮದು ಮಾಡಿಕೊಳ್ಳುವ ದುಸ್ಥಿತಿ ಬಂದೊದಗಬಹುದು. ಈಗಾಗಲೇ ಬಾಟಲಿ ನೀರಿನ ರೇಟು ಪೆಟ್ರೋಲ್ ರೇಟಿನ ಕಾಲು ಭಾಗಕ್ಕೆ ಬಂದು ನಿಂತಿದೆ. ಅಂತರ್ಜಲ ಬತ್ತಿ ಕೆರೆ, ಬಾವಿ, ಕುಂಟೆಗಳೆಲ್ಲ ಬರಿದಾಗಿ ನೀರಿನ ಹಾಹಾಕಾರ ಭುಗಿಲೇಳುವ ಮುನ್ನ ಎಚ್ಚೆತ್ತು ನೀರಿನ ಸಮರ್ಪಕ ನಿರ್ವಹಣೆ ಮಾಡಿದಾಗ ಮಾತ್ರ ಮುಂದಿನ ಪೀಳಿಗೆಯವರಿಗೆ ಜೀವಜಲ ಉಳಿದುಕೊಳ್ಳಲು ಸಾಧ್ಯ. ಈ ದಿಶೆಯಲ್ಲಿ ಇಂದಿನಿಂದಲೇ ನಿಮ್ಮ ಅಕ್ಕ-ಪಕ್ಕದ ನಿವಾಸಿಗಳು, ಬಂಧು-ಬಳಗದವರಿಗೆ ಸ್ನೇಹಿತರಿಗೆ ಜಾಗೃತಿ ಮೂಡಿಸೋಣ.

ಅಕ್ಷಯ.ಕೆ ಸಹ - ಶಿಕ್ಷಕ
ಸ. ಹಿ. ಪ್ರಾ.ಶಾಲೆ, ನಾರಬಂಡ (ಅರಕೆರಾ)

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101